# ಅರೆಹೊಳೆ ಪ್ರತಿಷ್ಠಾನ

• ಶಿಕ್ಷಣ • ಕಲೆ • ಸಾಹಿತ್ಯ • ಸಂಸ್ಕೃತಿ

ನಂದಗೋಕುಲ

ದಿನಾಂಕ 15.12.2019ರಂದು ಮಂಗಳೂರಿನ ಪಾದುವಾ ಕಾಲೇಜಿನಲ್ಲಿ ನಡೆದ
ಹಿರಿಯ ರಂಗಕರ್ಮಿ ಶ್ರೀ ಸದಾನಂದ ಸುವರ್ಣ ಗೌರವಾರ್ಥ,
ಐದನೆಯ ರಾಜ್ಯ ಮಟ್ಟದ ಅರೆಹೊಳೆ ರಂಗ ಹಬ್ಬದಲ್ಲಿ ರಂಗಭೂಮಿಯ ಸಾಧನೆಯನ್ನು ಗುರುತಿಸಿ,

**ರೆ. ಫಾ. ಅಲ್ವಿನ್ ಸೆರಾವೋ**

ಅವರಿಗೆ ನೀಡಿದ

## ಅರೆಹೊಳೆ ರಂಗಭೂಮಿ ಪ್ರಶಸ್ತಿ-2019

ರಂಗಭೂಮಿಯೊಂದೇ ಮತ ಮತ್ತು ಅದೊಂದೇ ಜನಹಿತ ಮತ ಎಂಬ ನಂಬುಗೆಯೊಡನೆ, ಪ್ರತೀ ವ್ಯಕ್ತಿತ್ವಕ್ಕೂ ಅದರದ್ದೇ ಆದ ವಿಶೇಷತೆ ಇದೆ ಎಂಬ ಚಿಂತನೆಗಳ ಜೊತೆಗೆ ರಂಗ ಕಾಯಕದಲ್ಲಿ ನಿತ್ಯ ನಿರತರಾದ ರಂಗಕರ್ಮಿ, ಸಂಘಟಕ, ನಾಟಕ ಕಾರ!

ಆಂಗ್ಲದಿಂದ ಕೊಂಕಣಿಗೆ ಅನುವಾದಿಸಿದ ನಾಟಕಗಳು, ಕೊಂಕಣಿಯಲ್ಲೇ ಸ್ವರಚಿತ ನಾಟಕಗಳು ರಂಗದ ಮೇಲೆ ರೂಪು ತಳೆದು ಜನ ಮಾನಸ ಗೆದ್ದ ಪರಿ-ಅದು ನಮಗೆ ಅಚ್ಚರಿ!

ಸದಾ ನಗುಮೊಗದಿಂದ ಪಾದುವಾ ಕಾಲೇಜು ಅಂಗಣ ಸ್ವಾಗತಿಸುತ್ತದೆ ಎಂದರೆ ಅದರ ಹಿಂದಿನ ದಣಿವರಿಯದ ಶಕ್ತಿ-ಅದು ತಾವೆಂಬುದು ಎಲ್ಲರೂ ಅರಿತಿರುವ ಉಕ್ತಿ!'ಪಾದುವಾ ಥಿಯೇಟರ್ ಹಬ್' - ರಾಜ್ಯಕ್ಕೇ ಮಾದರಿ ಯಾಗಿ ನಮ್ಮ ಜಿಲ್ಲೆಗೆ ತಾವು ಕಟ್ಟಿಕೊಟ್ಟ ಬಹು ದೊಡ್ಡ ಕ್ರಾಂತಿಕಾರಿ ಬದಲಾವಣೆ-ನಿಮಗದಕ್ಕೆ ಶರಣು

ಕನ್ನಡ, ತುಳು, ಕೊಂಕಣಿ-ಸಾಧ್ಯವಾದರೆ ಇತರ ಭಾಷೆಗಳ ನಾಟಕಕ್ಕೂ ವೇದಿಕೆ ನೀಡುವ ಮಹದಾಶಯದ ನೀವು, ನಮ್ಮ ರಂಗಭೂಮಿಯಲ್ಲಿ ಸದಾ ಚಟುವಟಿಕೆಗೆ ಆದರ್ಶ

ಯುವ ಪಡೆಯನ್ನು ರಂಗದೆಡೆಗೆ ಸೆಳೆದ ತಮ್ಮ ಮಾಂತ್ರಿಕ ಶಕ್ತಿಗೆ, ನೂರು ದಿನಗಳ ರಂಗಶಿಬಿರದ ಮೂಲಕ ದಾಖಲೆ ಬರೆದ ತಮ್ಮ ಸಾಹಸಕ್ಕೆ, ರಂಗಭೂಮಿಯ ಬಗೆಗಿನ ನಿಮ್ಮ ಅನುದಿನದ ಚಿಂತನೆಗಳಿಗೆ ಬಹುಮುಖೀ ವ್ಯಕ್ತಿತ್ವದ ನಿಮ್ಮೊಳಗಿನ ಅಜಾತ ಶತ್ರುವಿಗೆ, ಗೌರವಪೂರ್ವಕವಾಗಿ ನೀಡುತ್ತಿರುವ



ರೆ. ಫಾ. ಅಲ್ವಿನ್ ಸೆರಾವೋ

### ಅರೆಹೊಳೆ ರಂಗಭೂಮಿ ಪ್ರಶಸ್ತಿ-2019

ತಮ್ಮ ನಿರಂತರ ರಂಗ ಚಟುವಟಿಕೆಗಳು ರಂಗಭೂಮಿಗೆ ಹೊಸ ಕಾಯಕಲ್ಪ ನೀಡುವಲ್ಲಿ ಯಶ ಕಾಣಲಿ ಎಂದು ಹಾರೈಸುತ್ತಿದ್ದೇವೆ.

| | | | |
|---|---|---|---|
| ಧರ್ಮದರ್ಶಿ ಹರಿಕೃಷ್ಣ ಪುನರೂರು<br>ಗೌರವಾಧ್ಯಕ್ಷರು | ಕೆ ಪಿ ಪ್ರಭು<br>ಗೌರವ ಸಲಹೆಗಾರರು | ಅರೆಹೊಳೆ ಸದಾಶಿವ ರಾವ್<br>ಅಧ್ಯಕ್ಷರು | ವಿಶಾಲಾಕ್ಷಿ ರಾವ್<br>ಪ್ರಧಾನ ಕಾರ್ಯದರ್ಶಿ |

ಹಾಗೂ ಸರ್ವ ಸದಸ್ಯರು, ಅರೆಹೊಳೆ ಪ್ರತಿಷ್ಠಾನ ಹಾಗೂ ನಂದಗೋಕುಲ

Scanned with CamScanner

ಪದಾರ್ಥ ಚಿಂತಾಮಣಿ

# 'ರಂಗಭೂಮಿಗೆ ಭಾಷೆ, ಜಾತಿ, ಮತದ ಹಂಗಿಲ್ಲ'



ವಂ| ಆಲ್ವಿನ್ ಸೆರಾವೋ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಮಹಾನಗರ**, ಡಿ. 18: ರಂಗಭೂಮಿಯ ಮೂಲಕ ಜಗತ್ತಿಗೇ ಪ್ರೀತಿಯ ಸಂದೇಶವನ್ನು ಹರಡಬಹುದು. ಇಲ್ಲಿ ಯಾವುದೇ ಭಾಷೆ, ಜಾತಿ, ಮತದ ಹಂಗಿಲ್ಲದೇ ಜನಪ್ರೀತಿಯೊಂದನ್ನೇ ಪ್ರಮುಖವಾಗಿ ಪಸರಿಸಬಹುದು ಎಂಬುದನ್ನು ಪಾದುವಾ ಕಾಲೇಜಿನ ಪ್ರಾಂಶುಪಾಲ ವಂ| ಆಲ್ವಿನ್ ಸೆರಾವೋ ನಿರೂಪಿಸಿದ್ದಾರೆ ಎಂದು ಹಿರಿಯ ರಂಗಕರ್ಮಿ ಐ.ಕೆ. ಬೊಳುವಾರು ಹೇಳಿದರು.

ರಂಗಭೂಮಿಯಲ್ಲಿ ಸಲ್ಲಿಸಿದ ಸೇವೆಗಾಗಿ ಪಾದುವ ಕಾಲೇಜಿನ ಪ್ರಾಂಶುಪಾಲ ವಂ| ಆಲ್ವಿನ್ ಸೆರಾವೋ ಅವರಿಗೆ 2019ನೇ ಸಾಲಿನ ರಾಜ್ಯಮಟ್ಟದ ಅರೆಹೊಳೆ ರಂಗಭೂಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಭಿನಂದನ ಮಾತುಗಳನ್ನಾಡುತ್ತಾ ಹೇಳಿದರು.

ಪಾದುವ ಕಾಲೇಜಿನ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ, ಅರೆಹೊಳೆ ಪ್ರತಿಷ್ಠಾನ, ಪಾದುವ ರಂಗ ಅಧ್ಯಯನ ಕೇಂದ್ರ ಹಾಗೂ ಅಸ್ತಿತ್ವ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿರುವ, ಹಿರಿಯ ರಂಗಕರ್ಮಿ ಸದಾನಂದ ಸುವರ್ಣ ಅವರ ಗೌರವಾರ್ಥದ ಅರೆಹೊಳೆ ರಂಗ ಹಬ್ಬದ ಮೂರನೆಯ ದಿನ ವಂ| ಆಲ್ವಿನ್ ಸೆರಾವೋ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ರಂಗಪ್ರೀತಿಗೆ ತಮ್ಮ ಬೆನ್ನೆಲುಬಾಗಿ ನಿಂತ ವಿದ್ಯಾರ್ಥಿ ವೃಂದ, ರಂಗಾಸಕ್ತರ ಪಾಲಿಗೆ ಸಂದ ಪ್ರಶಸ್ತಿ ಇದಾಗಿದ್ದು ಇದಕ್ಕೆ ತಾನು ನಿಮಿತ್ತ ಮಾತ್ರ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆ.ಸಿ. ಪ್ರಭು, ಇಂತಹ ಪ್ರಶಸ್ತಿಗಳ ಮೂಲಕ, ನಿಸ್ವಾರ್ಥ ಸೇವೆ ಮಾಡುವ ಸಾಧಕರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಆಯನ ನಾಟಕದ ಮನೆಯ ಮೋಹನ್ ಚಂದ್ರ ಯು., ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಜೋಸೆಫ್ ನೀನಾಸಂ, ರಂಗಕರ್ಮಿ ಕ್ರಿಸ್ಟೋಫರ್ ನೀನಾಸಂ, ಜೇಸಿಐ ಲಾಲ್‌ಬಾಗ್ ಅಧ್ಯಕ್ಷ ಪ್ರೀತಮ್ ಪ್ರಿನ್ಸ್ ಪಿಂಟೋ, ಫಾ| ಆಲ್ವಿನ್ ಸೆರಾವೋ ಅವರ ತಂದೆ-ತಾಯಿ ಹಾಗೂ ಸಹೋದರ, ಅರೆಹೊಳೆ ಪ್ರತಿಷ್ಠಾನದ ಉಪಾಧ್ಯಕ್ಷೆ ಗೀತಾ ಅರೆಹೊಳೆ ಉಪಸ್ಥಿತರಿದ್ದರು.

ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿ, ವಿಶಾಲಾಕ್ಷಿ ರಾವ್ ವಂದಿಸಿದರು. ಶ್ವೇತಾ ಅರೆಹೊಳೆ, ಪೃಥ್ವಿ ರಾವ್ ನಿರೂಪಿಸಿದರು. ಅನಂತರ ಪಾದುವಾ ರಂಗ ಅಧ್ಯಯನ ಕೇಂದ್ರದ ಮಸ್ಕರೇಡ್ ಶಿಬಿರಾರ್ಥಿಗಳಿಂದ ಕೇರಳದ ನಿರ್ದೇಶಕ ಅರುಣ್ ಲಾಲ್ ನಿರ್ದೇಶನದ ತುಳು ನಾಟಕ ಕೆಂಡೋನಿಯನ್ ಪ್ರದರ್ಶನಗೊಂಡಿತು.

# ಆರೋಗ್ಯ ಕಾರ್ಡ್ ವಿತರಣೆ



ನೂತನ ಕಾರ್ಪೋರೇಟರ್ ನಯನಾ ಆರ್. ಕೋಟ್ಯಾನ್ ಅವರನ್ನು ಸಮ್ಮಾನಿಸಲಾಯಿತು.

**ಸುರತ್ಕಲ್**, ಡಿ. 18: ಹೊಸಬೆಟ್ಟು ಮೀನುಗಾರ ಸಹಕಾರಿ ಸಂಘದ ವತಿಯಿಂದ ಮಂಗಳೂರು ಮಹಾನಗರ ಪಾಲಿಕೆಯ ಇಡ್ಯಾ 7ನೇ ವಾರ್ಡ್‌ನ ನೂತನ ಕಾರ್ಪೋರೇಟರ್ ನಯನಾ ಆರ್. ಕೋಟ್ಯಾನ್ ಅವರಿಗೆ ಸಮ್ಮಾನ ಹಾಗೂ ಸಂಘದ ಸದಸ್ಯರಿಗೆ ಆರೋಗ್ಯ ಕಾರ್ಡ್ ವಿತರಣೆ ಸಂಘದ ಆಡಳಿತ ಕಚೇರಿಯಲ್ಲಿ ಇತ್ತೀಚೆಗೆ ಜರಗಿತು.

ಸಂಘದ ಅಧ್ಯಕ್ಷ ಸಂತೋಷ್ ಹೊಸಬೆಟ್ಟು ಅಧ್ಯಕ್ಷತೆ ವಹಿಸಿದ್ದರು. ಹೊಸಬೆಟ್ಟು ಮೊಗವೀರ ಸಂಘದ ಮಾಜಿ ಅಧ್ಯಕ್ಷ ಯೋಗೀಶ್ ಎ. ಕರ್ಕೇರ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂಘ ನಡೆಸುತ್ತಿರುವ ಕೆಲಸಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ನಡೆಸಿ ಸಂಘದ ಸದಸ್ಯರಿಗೆ ನೆರವಾಗುವಂತೆ ಸಲಹೆ ನೀಡಿದರು.

ಸಮ್ಮಾನ ಸ್ವೀಕರಿಸಿದ ಮಹಾನಗರ ಪಾಲಿಕೆಯ ನೂತನ ಕಾರ್ಪೋರೇಟರ್ ನಯನಾ ಆರ್. ಕೋಟ್ಯಾನ್ ಕೃತಜ್ಞತೆಯನ್ನು ಸಲ್ಲಿಸುತ್ತಾ, ವಾರ್ಡ್‌ನ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಭರವಸೆಯನ್ನು ನೀಡಿದರು.

ಮಹಿಳಾ ಮೀನುಗಾರರ ಹಲವಾರು ಗುಂಪುಗಳನ್ನು ರಚಿಸಿ, ಸರಕಾರದ ಯೋಜನೆಯಾದ ಶೂನ್ಯ ಬಡ್ಡಿ ದರದಲ್ಲಿ ಮೀನು ಮಾರಾಟಕ್ಕಾಗಿ ಗುಂಪು ಸಾಲಗಳನ್ನು ವಿಜಯ ಬ್ಯಾಂಕ್‌ನ ಮೂಲಕ ದೊರಕಿಸಿ ಕೊಡಲಾಯಿತು.

ಸಂಘದ ಉಪಾಧ್ಯಕ್ಷರಾದ ಪ್ರಮೀಳಾ ಎ. ಕೋಟ್ಯಾನ್, ನಿರ್ದೇಶಕರಾದ ವಿಟ್ಠಲ್ ಜಿ. ಕರ್ಕೇರ, ಉದಯ ಎಸ್. ಕುಂದರ್, ಹರಿಕೃಷ್ಣ ಎಂ. ಸಾಲ್ಯಾನ್, ದಾಮೋದರ ಕರ್ಕೇರ, ಪ್ರೇಮಾ ಎ. ಸಾಲ್ಯಾನ್ ಉಪಸ್ಥಿತರಿದ್ದರು. ಸಂಘದ ನಿರ್ದೇಶಕ ರಮೇಶ್ ಅಮೀನ್ ವಂದಿಸಿದರು.

ಮಂಗಳೂರು ಕಾವೂರು ಮರಕಡದಲ್ಲಿ
ಕಡಿಮೆ ಖರ್ಚಿನಲ್ಲಿ ಉಳಕೊಳ್ಳುವ
ಏಕೈಕ ತಾಣ






SHARDA
RESIDENCY
A/C LODGING & BOARDING

FACILITIES
SPACIOUS FAMILY A/C ROOMS | 24 HOURS FRONT DESK | COMPLIMENTARY BREAKFAST | 24 HOURS HOT AND RUNNING WATER | DRY CLEANING AND LAUNDRY FACILITY | PICK UP & DROP FACILITY FROM AIRPORT, RAILWAY STATION AND BUS STAND | DAILY HOUSE KEEPING FACILITY | PARKING AVAILABLE | TEA AND COFFEE SETUP IN ALL THE ROOMS

Add : Sharda Residency, KHB Colony Road, Marakada, Mangalore.
Te : 0824 - 295251 / 7349360787

ಒಂದು ಖರೀದಿಗೆ ಒಂದು ಉಚಿತ ಇದು ನಮ್ಮ ವೈಶಿಷ್ಟ್ಯ
BUY ONE TAKE ONE FREE
ಮನಸೂರೆಗೊಳ್ಳುವ ಬಟ್ಟೆಬರೆಗಳು! ಆಕರ್ಷಕ ದರ!



• Jeans Pant-Rs 500(2) • Formal Pant-Rs 460(2)
• Formal Shirts-Rs 480(2) • Short Shirts-Rs 380(2)
• Bermuda-Rs 90(2) • 3/4th Pant-RS 180(2)
• Track Pant-Rs 280(2) • Baba Suit-Rs 120(2)